T.L.M. ವಿಧಾನಗಳು ಮತ್ತು ಅದರ ಉಪಯೋಗ

- ಪೀಠಿಕೆ
- T.L.M.ವಿಧಗಳು
- ಡಿಜಿಟಲ್ ಸಾಫ್ಟ್ ವೇರ್ ಅರ್ಥ ಮತ್ತು ಪರಿಕಲ್ಪನೆ
- ಡಿಜಿಟಲ್ ಸಾಫ್ಟ್ ವೇರ್ ಉಪಯೋಗಗಳು
- ಸಂಸ್ಥೆಗೆ ಸಂಬಂಧಿಸಿದಂತೆ ವರದಿ ಬರೆಯುವುದು
    - ನಿಯಮ ಸಾಧನೆ
    - ಮಾಹಿತಿ ಕಲಿಯುವವರ ಅಧ್ಯಯನ ಪದ್ದತಿ
    - ನಿರ್ವಹಣಾ ಕಾರ್ಯ ವಿಧಾನ
- ಉಪಸಂಹಾರ

ಡಾ. ಸವಿತಾ

ಪೀಠಿಕೆ :

ಮಾನವ ಇಂದು ಪ್ರಗತಿಯ ಶಿಖರಕ್ಕೆ ತಲುಪಿದ್ದಾನೆ . ಆತನ ಜೀವನದ ಪ್ರತಿಯೊಂದುಕ್ಷೇತ್ರದಲ್ಲಿ ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವವನ್ನು ವ್ಯಾಪಕವಾಗಿ ಕಾಣುತ್ತೇವೆ . ಜೀವನದ ಯಾವುದೇ ಕ್ಷೇತ್ರದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅನ್ವಯಿಸಿದಾಗ ಅದು ಪ್ರಮಾಣಾತ್ಮಕ ಅಭಿವೃದ್ಧಿ ಮಾತ್ರವಲ್ಲ ಗುಣಾತ್ಮಕ ಅಭಿವೃದ್ಧಿಗೂ ಮೂಲಭೂತಕಾರಣವಾಗಿದೆ .

ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯಿಂದಶಿಕ್ಷಣ ಕ್ಷೇತ್ರವೂ ಹೊರತಾಗಿಲ್ಲ.ಪ್ರಯೋಗಗಳ ಮೂಲಕ ಕಂಡುಕೊಂಡ ಫಲಿತಾಂಶಗಳನ್ನು ಶಿಕ್ಷಣದಲ್ಲಿ ಉಪಯೋಗಿಸಿಕೊಂಡು ಸುಧಾರಣೆಯನ್ನು ತಂದುಕೊಳ್ಳಲು ಪ್ರಯತ್ನಿಸುತ್ತಿದ್ದೇವೆ . ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗೆ (T.L.M.) ಬೋಧನಾ ಕಲಿಕಾ ಸಾಮಗ್ರಿಗಳ ಬಳಕೆಯಿಂದ ಇಂದು ಶಿಕ್ಷಣದಲ್ಲಿ ಹೊಸ ಅಲೆ ಪ್ರಾರಂಭಿಸಿದೆ . ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗೆ ಸಂಬಂಧಿಸಿದ ಹೊಸ ಹೊಸ ವಿಧಾನಗಳನ್ನು ಅನುಸರಿಸುತ್ತಿದ್ದೇವೆ. ಸಾಂಪ್ರದಾಯಿಕ ಪದ್ಧತಿಗಳು ಅಸಹಾಕವಾಗಿದ್ದರಿಂದ ಹೆಚ್ಚು ಹೆಚ್ಚು ಜನರನ್ನು ಕಡಿಮೆ ಅವಧಿಯಲ್ಲಿ ಪರಿಣಾಮಕಾರಿಯಾಗಿ ಸುಶಿಕ್ಷತರನ್ನಾಗಿ ಮಾಡಲು ಸಂಪರ್ಕ ಮಾಧ್ಯಮಗಳನ್ನು ಉಪಯೋಗಿಸುವುದು ಸೂಕ್ತ ಎಂದು ಎನಿಸುತ್ತದೆ .

ಬೋಧನಾ ಕಲಿಕಾ ಸಾಮಗ್ರಿಗಳ ವಿಧಗಳು

(T.L.M.) Teaching Learning Material

I)ಮುದ್ರಿತ ಕಲಿಕಾ ಸಾಮಗ್ರಿಗಳು

1) ಪಠ್ಯ ಪುಸ್ತಕಗಳು

2)ನಿಘಂಟುಗಳು

3)ವಿಶ್ವಕೋಶಗಳು

4) ಇತರೆ ಪುಸ್ತಕಗಳು

II) ಶ್ರವ್ಯ ಕಲಿಕಾ ಸಾಮಗ್ರಿಗಳು

I) ರೇಡಿಯೋ

2) ಧ್ವನಿಸುರಳಿ

III) ದೃಕ್ - ಕಲಿಕಾ ಸಾಮಗ್ರಿಗಳು

1)ಕಪ್ಪು ಹಲಿಗೆ

2) ಚಿತ್ರಗಳು

3)ಚಮಕಿಸುವ ಕಾರ್ಡುಗಳು

4) ಚಾರ್ಟ್‌ಗಳು ಹಾಗೂ ಫಲಕ

5)ಶಿರೋನ್ನತ ಪ್ರಕ್ಷೇಪಕ

6) ಸ್ಲೈಡ್ ಗಳು

7) ಶ್ರವ್ಯ - ದೃಶ್ಯ ಸಾಮಗ್ರಿಗಳು

IV) ಸಮೂಹ ಮಾಧ್ಯಮಗಳು

1)ದೂರದರ್ಶನ

2)ವಾರ್ತಾ ಪರ್ತಿಕೆ

3)ಚನಲಚಿತ್ರ

VI ಚಟುವಟಿಕೆಗಳು

1)ಪ್ರವಾಸ

2)ಸಂದರ್ಶನ

3)ಅಭಿನಯ

V ಭಾಷಾ ಪ್ರಯೋಗಾಲಯ

ಇವುಗಳೊಂದಿಗೆ ಶೈಕ್ಷಣಿಕ ತಂತ್ರಜ್ಞಾನ ಕಠಿಣ ಸಾಮಗ್ರಿ ಮತ್ತು ಮೃದು ಸಾಮಗ್ರಿ ಕಂಪ್ಯೂಟರನ ಮಹತ್ವ ಮೊದಲಾದವುಗಳ T.L.M. ನಲ್ಲಿ ಆಕಡವಾಗುತ್ತವೆ ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಶಿಕ್ಷಣದಲ್ಲಿ ಹೊಸ ಗಾಳಿ ಬೀಸುತ್ತಿದೆ. ಇಂದಿನ ಯಾವುದೇ ಕಲಸವು ಕಂಪ್ಯೂಟರ್ ಸಹಾಯದಿಂದ ಸುಲಭವಾಗುತ್ತಿದೆ .

T.L.M. ಉಪಯೋಗಗಳು

1) ಮಕ್ಕಳಿಗೆ ಕಲಿಕೆಗೆ ಪ್ರೇರಣೆಗೊಳಿಸಿ ಸಿದ್ಧಪಡಿಸಲು ಸಹಾಯಕ
2) ಚಟುವಟಿಕೆಗಳ ಮೂಲಕ ಕಲಿಯಲು ಸಹಾಯಕವಾಗಿದೆ.
3) ಬೋಧನೆ ಮತ್ತು ಕಲಿಕೆ ನಡುವೆ ಜೀವಂತ ಸಂವಹನ ಮಾಡುತ್ತದೆ
4) ಮಕ್ಕಳು ಕಲಿಕಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಕಲಿಯುವರು .
5) ಮಕ್ಕಳ ಕುತೂಹಲ, ಆಸಕ್ತಿ ಅವಧಾನ ಹೆಚ್ಚುತ್ತದೆ.
6) ಕಲಿಯುವ ವಿಷಯ ಕುರಿತು ಬಹುಮುಖ ಚಿಂತನೆ ಬೆಳೆಸಬಹುದು .
7) ಕಲಿಕೆ ನಿರಸವಾಗದೆ ಕ್ರಿಯಾಶೀಲವಾಗಿ ಮೂಡಿ ಬರುತ್ತದೆ .
8) ಕಲಿಕಾ ಪ್ರಕ್ರಿಯೆಯಲ್ಲಿ ಹೆಚ್ಚು ಜ್ಞಾನೇಂದ್ರಿಯಗಳು ಪಾಲ್ಗೊಳ್ಳುತ್ತವೆ .
9) ಶಿಕ್ಷಕರಿಗೆ ಬೋಧನೆಯಲ್ಲಿ ಆತ್ಮವಿಶ್ವಾಸ ಮೂಡುತ್ತದೆ
10) ಮಕ್ಕಳು ದೃಕ್ ಶ್ರವಣೋಪಕರಣಗಳ ಮೂಲಕ ಸ್ವಯಂ ಕಲಿಯಲು ಶಕ್ತರಾಗುವರು
11) ಕಲಿಕೆಯ ವೇಗ ಉತ್ತಮವಾಗುತ್ತದೆ .
12) Etc….

ಡಿಜಿಟಲ್ ಸಾಫ್ಟ್ವೇರ್ ಅರ್ಥ ಮತ್ತು ಪರಿಕಲ್ಪನೆ

ಪ್ರಕೃತಿಯ ಹಲವಾರು ವೈಶಿಷ್ಟಗಳಲ್ಲಿ ಮಾನವನ ಸೃಜನಶೀಲತೆಯೂ ಒಂದು . ಈ ಸೃಜನಶೀಲತೆಯಿಂದ ಇಂದು ನಾವು ಆಧುನಿಕತೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸುತ್ತಿದ್ದೇವೆ . ಸೃಜನಶೀಲತೆಯ ಒಂದು ತಾಂತ್ರಿಕ ಕೊಡುಗೆಯೇ ಗಣಕಯಂತ್ರ . ಗಣಕಯಂತ್ರಗಳ ಸೃಷ್ಟಿ ಮತ್ತು ಬೆಳವಣಿಗೆಯಲ್ಲಿ ಗಣಿತಜ್ಞರ ಸೃಜನಶೀಲತೆಯು ಅಪರಿಮಿತ , ಗಣಕಯಂತ್ರವು ಗಣಿತಜ್ಞರ ಮತ್ತು ಗಣಿತಶಾಸ್ತ್ರದ ಶಿಶುವಾಗಿ ಜನ್ಮ ತಳೆದು ತಾಂತ್ರಿಕ ಸಾಕಾರತೆಯ ಸ್ಫೂರ್ತಿ ಆಗಿದೆ . ಗಣಕ ಯಂತ್ರವು ಆಧುನಿಕ ವೈಜ್ಞಾನಿಕ ಜಗತ್ತಿನ ವಿದ್ಯುನ್ಮಾನ ಕ್ಷೇತ್ರದ ಅದ್ಭುತ ಸೃಷ್ಟಿಯಾಗಿದೆ . ಇದುಕೇವಲ ಗಣನಾ ಕಾರ್ಯ ಒಂದನ್ನೇ ಮಾಡದೆ , ಸಂವಹನ , ಮುದ್ರಣ , ಮನೋರಂಜನಾ ಕಾರ್ಯಗಳನ್ನು ಸಹ ಮಾಡುತ್ತದೆ .

ಡಿಜಿಟಲ್ ಸಾಫ್ಟ್‌ವೇರ್‌ದ ಉಪಯೋಗಗಳು

ಗಣಕ ಯಂತ್ರಗಳ ವರ್ಗೀಕರಣ :

ಗಣಕ ಯಂತ್ರಗಳಿಗೆ ನೀಡುವ ದತ್ತಾಂಶಗಳಿಗನುಗುಣವಾಗಿ ಗಣಕಯಂತ್ರ ದತ್ತಾಂಶಗಳನ್ನು ಸ್ವೀಕರಿಸುವ ಪ್ರಕ್ರಿಯೆಗೆ ಅನುಗುಣವಾಗಿ , ಕ್ರಿಯಾತ್ಮಕ್ಕನುಗುಣವಾಗಿ ಗಣಕಯಂತ್ರಗಳಲ್ಲಿ ಪ್ರಮುಖವಾಗಿ ಮೂರು ವಿಧಗಳು ,

1) ಸಂಖ್ಯಾ ಗಣಕಯಂತ್ರ

2) ಸಾದೃಶ್ಯ ಗಣಕಯಂತ್ರ

3) ಮಿತ್ರ ಗಣಕ ಯಂತ್ರ

ಶಿಕ್ಷಣ ಕ್ಷೇತ್ರದಲ್ಲಿ ಗಣಕಯಂತ್ರದ ಕ್ರಾಂತಿ :

ಮಾಹಿತಿ ತಂತ್ರಜ್ಞಾನದ ಕ್ರಾಂತಿ ಶಿಕ್ಷಣ ಕ್ಷೇತ್ರದಲ್ಲಿ ತೀವ್ರ ಚಲನಾ ಸ್ವರೂಪವುಳ್ಳದ್ದಾಗಿದೆ .20 ನೇ ಶತಮಾನದ ವಿದ್ಯುನ್ಮಾನ ಕ್ಷೇತ್ರದಲ್ಲಿಯ ಕ್ರಾಂತಿಯ ಫಲವಾಗಿ ರೂಪಗೊಂಡ ಗಣಕಯಂತ್ರವನ್ನು ಶಿಕ್ಷಣ ಪಡೆಯದ ವ್ಯಕ್ತಿಯನ್ನು ಅನಕ್ಷರಸ್ಥ ಎಂಬ ಭಾವನೆಯನ್ನು ತಾಳುವ ಕಾಲ 6 ಆಂಶಗಳು ಈ ಅಭಿವೃದ್ಧಿಪಡಿಸಲು ಗಣಕ ಯಂತ್ರಗಳನ್ನು ಬಳಸಲಾಗುತ್ತಿದ್ದು ಕೆಳಗಿನಂತಿದೆ .

1)ಬೋಧನಾ ಪ್ರಕ್ರಿಯೆಯಲ್ಲಿ ಸುಧಾರಣೆ ತರಲು (CAL ಮತ್ತು CMIL ವ್ಯವಸ್ಥೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ .

2) ಕಲಿಕಾ ಪ್ರಕ್ರಿಯೆಯಲ್ಲಿ ಹೊಸತನವನ್ನು ಕಾಣಲು CAL , CML ಕಲಿಕಾ ವಿಧಾನಗಳು ಕಲಿಕಾಶಾರನ ಆವಧಾನವನ್ನು ಸೆಳೆದಿದೆ .

3)ವೈಜ್ಞಾನಿಕ ವಿಷಯಗಳಾದ ವೈದಕೀಯ , ತಾಂತ್ರಿಕ , ಕೃಷಿ , ಸೂಕ್ಷ್ಮಜೀವಿ , ವಿಜ್ಞಾನ , ಬಾಹ್ಯಾಕಾಶ ವಿಜ್ಞಾನ , ಸಮುದ್ರ ವಿಜ್ಞಾನ , ಮಾಹಿತಿ ತಂತ್ರಜ್ಞಾನ , ತಳಿಶಾಸ್ತ್ರ , ಮುಂತಾದ ವೈಜ್ಞಾನಿಕ ವಿಷಯಗಳ ಬೋಧನಗೆ ಗಣಕಯಂತ್ರ ಅತಿ ಅವಶ್ಯಕ .

4)ಶೈಕ್ಷಣಿಕ ಸಂಶೋಧನೆಗಳನ್ನು ಪ್ರಯೋಗಗಳನ್ನು ಕೈಗೊಳ್ಳುವ ಪ್ರಯೋಗ ಶಾಲೆಗಳಲ್ಲಿ ಗಣಕ ಯಂತ್ರಗಳನ್ನು ಬಳಸುತ್ತಿದ್ದಾರೆ .

5) ವಿಶ್ವದ ಎಲ್ಲ ಪ್ರಚಲಿತ ವ್ಯವಸ್ಥೆ , ಪರಿಸರವನ್ನು ವರ್ಗ ಕೋಣಗೆ ತಂದು ಗಣಕಯಂತ್ರದ ಮೂಲಕ ಬೋಧಿಸಬಹುದು

ಹಾಡ್ಸ್‌ರವರು ಹೇಳುವಂತೆ-

"ಶೈಕ್ಷಮಿಕ ತಂತ್ರ ಶಾಸ್ತ್ರವು ಶಿಕ್ಷಣದ ತತ್ವ ಮತ್ತು ಪ್ರಯೋಗ ಶಾಖೆಯಾಗಿದೆ . ಅದು ಕಲಿಕೆಯ ಮೇಲೆ ನಿಯಂತ್ರಣ ಹೊಂದಿ ಮುಖ್ಯವಾಗಿ ವಿನ್ಯಾಸ ಮತ್ತು ಮಾಹಿತಿಯ ಉಪಯೋಗಕ್ಕೆ ಸಂಬಂಧಿಸಿದ್ದಾಗಿದೆ ."

ಭಾಷಾ ಬೋಧನೆಯಲ್ಲಿ ಅಂತರಜಾಲ

ಹಲವಾರು ಇಲಾಖೆಗಳು , ಸಂಸ್ಥೆಗಳಿಂದ ಕನ್ನಡ ಬಾಷಾ , ಸಾಹಿತ್ಯ ಕಲೆಗೆ ಕಣವಿಧಿಸಿ ಹಲವಾಲು CI) , IDVI) ಗಳನ್ನು ಬಿಡುಗಡೆ ಮಾಡಲಾಗಿದೆ . ಆವುಗಳನ್ನು ಸದುಭಯೋಗಪಡಿಸಿಕೊಳ್ಳಬಹುದು . ಅಂತರ್ಜಾಲ ಮಾಹಿತಿಯ ಮಾಧ್ಯಮ ಹಾಗೂ ಮಾಹಿತಿಯ ಕಣಜ ಎಂತಲೂ ಕರೆಯಬಹುದು .

ಬೋಧನೆಯಲ್ಲಿ ಪ್ರಚಲಿತ ವಿದ್ಯಾಮಾನಗಳ ಬಳಕೆ

ನಮ್ಮ ಬೋಧನಾ ಪದ್ಧತಿಗಳಲ್ಲಿ ನವೀನ ಮಾದರಿ ಪದ್ಧತಿಗಳಲ್ಲಿ ಕೆಲವೊಂದು ನಮ್ಮ ಭಾಷಾ ಬೋಧನೆಯಲ್ಲಿ ತರಬಹುದು .

1) ಸಂಶೋಧನಾ ಪದ್ಧತಿ

2) ಆವಿಷ್ಕಾರ / ಅನ್ವೇಷಣಾ ಪದ್ದತಿ

3) ಯೋಜನಾ ಪದ್ದತಿ

4) ಸ್ವಯಂ ಬೋಧನ ಸಾಮಗ್ರಿಗಳ ವಿಧಾನ

5) ಕಂಪ್ಯೂಟರ್ ಸಹಾಯಕ ವಿಧಾನ

6) ಪಾತ್ರ ನಿರ್ವಹಣಾ ವಿಧಾನ

7) ದೃಕ್ ಶ್ರವಣೋಪಕರಣಗಳನ್ನು ಬಳಸಿ ಕಲಿಸುವ ವಿಧಾನ .

ಭಾಷಾ ಬೋಧನೆಯಲ್ಲಿ ಕಂಪ್ಯೂಟರ್ ಮತ್ತು CD ಗಳ ಬಳಕೆ

ಇಂದಿನ ಯುಗವನ್ನೇ ಕಂಪ್ಯೂಟರ್ ಯುಗ ಎಂದು ಕರೆಯುತ್ತೇವೆ . ಇಂದು ಎಲ್ಲಾ ಕ್ಷೇತ್ರಗಳಲ್ಲಿ ಗಣಕಯಂತ್ರದ ಬಳಕೆ ಇರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿಯೂ ನಾವು ಸದ್ಬಳಕೆ ಮಾಡಿಕೊಳ್ಳಬೇಕು . ಗಣಕಯಂತ್ರ ಸಹಾಯದಿಂದ ಕನ್ನಡ ಭಾಷೆ , ಸಾಹಿತ್ಯ , ಕಲೆ , ಸಂಸ್ಕೃತಿ ಮತ್ತು ವಾಸ್ತುಶಿಲ್ಪ ಮೊದಲಾದ ವಿಷಯಗಳನ್ನು ಸುಲಭವಾಗಿ ಅರ್ಥೈಸಲು ಸಾಧ್ಯವಿದೆ .

ಗಣಕ ಯಂತ್ರದಿಂದ ಕನ್ನಡ ಭಾಷಾ ಕಲಿಕೆಗೆ ಆಗುವ ಅನುಕೂಲಗಳು

- ಧ್ವನಿಯನ್ನು ಮುದ್ರಿಸಿ ಪುನಃ ಆಲಿಸುವುದರಿಂದ ಅಕ್ಷರ , ಪದ , ವಾಕ್ಯಗಳ ಉಚ್ಚಾರದಲ್ಲಿ ಆಗುವ ವ್ಯತ್ಯಾಸಗಳನ್ನು ಗುರ್ತಿಸಲು ಮತ್ತು ಸರಿಪಡಿಸಲು ಅನುಕೂಲವಾಗುತ್ತದೆ .
- 9 ವಿವಿಧ ಶೈಲಿಯ ಬರವಣಿಗೆಯನ್ನು ನೋಡಿ ಕಲಿಯಬಹುದು .
- CD DVD ಬಳಸಿದಾಗ ಪ್ರಾಚೀನ ಕಾಲದ ಶಾಸನಗಳು ಕಲೆ , ಸಂಸ್ಕೃತಿ ವಾಸ್ತುಶಿಲ್ಪ ಜನಪದ ವಿಷಯಗಳಿಗೆ ಸಂಬಂಧಪಟ್ಟ ಕಲಿಕೆ ಸ್ಥಿರೀಕರಣವಾಗುತ್ತದೆ .

ಭಾಷಾ ಬೋಧನೆಯಲ್ಲಿ ಸಾಹಿತ್ಯ ಕೃತಿಗಳು

ಕನ್ನಡ ಭಾಷಾ ತರಗತಿಗಳಿಗೆ ಕಲಿಕಾ ಸಾಮಗ್ರಿಗಳ ಲಭ್ಯತೆ ವಿಜ್ಞಾನ ವಿಷಯಕ್ಕೆ ಹೋಲಿಸಿದರೆ ಕಡಿಮೆ ಎಂಬ ಮನೋಭಾವನೆ ಅನೇಕ ಶಿಕ್ಷಕರಲ್ಲಿದೆ . ಆದರೆ ಕ್ರಿಯಾಶೀಲ ಕನ್ನಡ ಭಾಷಾ ಶಿಕ್ಷಕ ಮನಸ್ಸು ಮಾಡಿದರೆ ಹೆಚ್ಚು ಕಲಿಕಾ ಸಾಮಗ್ರಿಯನ್ನು ರಚಿಸಿ ಸಂಗ್ರಹಿಸಿದರ ಅಗತ್ಯವಾದಾಗ ತರಗತಿಗಳಲ್ಲಿ ಬಳಸಬಹುದು .

ಕನ್ನಡ ಭಾಷಾ ತರಗತಿಗಳಲ್ಲಿ ಬಳಸಬಹುದಾದ ಕಲಿಕಾ ಸಾಮಗ್ರಿ

- ಮಿಂಚುಪಟ್ಟಿಗಳು - ಪದ , ವಾಕ್ಯಗಳು
- ಆಕರ ಗ್ರಂಥಗಳು ಇತ್ಯಾದಿ - ಕವನ ಸಂಕಲನ , ನಾಟಕ , ಕಥಾಸಂಕಲನ

ಚಿತ್ರಗಳು

1) ಲೇಖಕರ ಕವಿಗಳ ಭಾವಚಿತ್ರಗಳು ಮತ್ತು ಕೈ ಬರವಣಿಗೆಯ ಮಾದರಿಗಳು

2) ಶಾಸನಗಳು , ಲಿಪಿಗಳು , ವಾಸ್ತುಶಿಲ್ಪ ಸಂಬಂಧಿ ಚಿತ್ರಗಳು

3) ಆಚರಣೆ , ಸಂಸ್ಕೃತಿ ಪರಂಪರೆಗೆ ಸಂಬಂಧಿಸಿದವು - ಜಾತ್ರೆ , ಕ್ರೀಡೆ , ನೃತ್ಯ

ಧ್ವನಿ ಮುದ್ರಿಕೆಗಳು

1) ಸಿ.ಡಿ. , ಡಿ.ಎಡಿ

2) ದೃಶ್ಯಾವಳಿಗಳು

3) ಸಾಕ್ಷ್ಯ ಚಿತ್ರಗಳು

4) ಕವಿಗಳ , ಲೇಖಕರ ಸ್ವರಚಿತ ಕವನಗಳ ಅಡಕ ಮುದ್ರಿಕೆ

5) ಜ್ಞಾನಪೀಠ ಲೇಖಕರ ಕವಿ ಕೃತಿಗಳ ಪರಿಚಯ ಮಾಡಿಸುವುದು .

ಉಪಸಂಹಾರ :

ಉತ್ತಮ ಭಾಷಾ ಬೋಧನೆಗೆ ಬೋಧನೋಪಕರಣಗಳ ಅಗತ್ಯವಿದೆ . ಪರಿಣಾಮಕಾರಿ ಕಲಿಕೆಗೆ ಯಾವುದೇ ಒಂದು ವಿಧಾನ ಸಾಧ್ಯವಿಲ್ಲ ಎಂದೇ ಹೇಳಬಹುದು . ಇಂತಹ ವಿಧಾನವೇ ಶ್ರೇಷ್ಠ ಎಂಬಂತೆ ಯಾವುದೂ ಇಲ್ಲ . ಕಲಿಕೆಯನ್ನು ಅನುಕೂಲಿಸುವುದು ಒಂದು ಸಂಕೀರ್ಣ ಕೌಶಲ , ಒಂದು ಕಲೆ ಕಲಿಸುವುದೆಲ್ಲವೂ ಕಲಿಕೆ ಆಗಬಾರದು . ಮಾಹಿತಿಯನ್ನು ಯಾಂತ್ರಿಕವಾಗಿ ರವಾನಿಸುವುದು , ಬೋಧನೆಯಲ್ಲಿ ವಿಷಯಗಳ ಮಾಂತ್ರಿಕವಾಗಿ ಸಂಗ್ರಹಿಸುವುದು ಕಲಿಕೆಯೂಅಲ್ಲ , ಎಷ್ಟು ಕಲಿಕೆಯನ್ನು ಅನುಕೂಲಿಸಿದವು ಎನ್ನುವುದಕ್ಕಿಂತ ಹೇಗೆ ಅನುಕೂಲಿಸುವಿಕೆ ನಡೆಯಿತು ಎಂಬುದು ಮುಖ್ಯ ಉತ್ತಮ ಭಾಷಾ ಬೋಧನೆಯಲ್ಲಿ ರೇಡಿಯೋ , ದೂರದರ್ಶನ ವಿಡಿಯೋ , ಆಡಿಯೋ ವೃತ್ತಪತ್ರಿಕೆಗಳು ಪ್ರಮುಖ ಪಾತ್ರವಹಿಸುತ್ತವೆ .

ಸಂಸ್ಥೆಗೆ ಸಂಬಂಧಿಸಿದಂತೆ ವರದಿಬರೆಯುವುದು :

ಪೀಠಿಕೆ :

ಈ ಯುಗ ಆವಿಷ್ಕಾರಯುಗ , ಯೋಜನಾಯುಗೆ ಎಂದು ಕರೆಯುತ್ತೇವೆ , ಮನುಷ್ಯನ ಚಟುವಟಿಕೆಗಳು ನಾಲ್ಕು ಗೋಡೆಗಳಿಂದ ಅಂತರರಾಷ್ಟ್ರೀಯವರೆಗೆ , ಪ್ರಾಥಮಿಕ ಶಿಕ್ಷಣದಿಂದ ಮೊದಲುಗೊಂಡು ಉತ್ತನ ಶಿಕ್ಷಣದವರೆಗೆ ಪ್ರತಿಯೊಂದು ಚಟುವಟಿಕೆಗಳನ್ನು ಸಾಕಷ್ಟು ಪೂರ್ವದಲ್ಲಿಯೇ ಯೋಜನೆಗಳಿಂದ ಕೈಗೊಳ್ಳಲಾಗುತ್ತದೆ , ಪ್ರತಿಯೊಂದು ಶಾಲೆಯ ಪ್ರಗತಿ , ಅಭಿವೃದ್ಧಿ ಸಾಧಿಸಬೇಕೆಂದುಕೊಂಡಿದ್ದಾರೆ . ತನ್ನ ವೈಯಕ್ತಿಕ ಮೂಲಗಳಿಂದ ದೊರೆಯುವ ಸಂಪನ್ಮೂಲಗಳನ್ನು ಆಧಾರವಾಗಿಟ್ಟುಕೊಂಡು ಯೋಜನೆಗಳನ್ನು ನಿರ್ಮಿಸಿಕೊಳ್ಳಬೇಕು . ಈ ರೀತಿಯಾಗಿ ನಿರ್ಮಿಸಿಕೊಂಡು ಯೋಜನೆಯಿಂದ ಶಾಲೆಯುಹಂತಹಂತವಾಗಿ ಪ್ರಗತಿ ಸಾಧಿಸಲು ನೆರವಾಗುತ್ತದೆ . ಇಂದು ಶೈಕ್ಷಣಿಕ ಯೋಜನೆಗಳು ರಾಷ್ಟ್ರಮಟ್ಟದಲ್ಲಿ ಸಿದ್ಧಗೊಳ್ಳುತ್ತಲಿವೆ . ಈ ರೀತಿ ರಾಷ್ಟ್ರಮಟ್ಟದಲ್ಲಿ ಸಿದ್ಧಗೊಳ್ಳುವ ಶೈಕ್ಷಣಿಕ ಯೋಜನೆಗಳು ಪ್ರತಿ ಶಾಲೆಗೂ ಸೂಕ್ತ ಎನಿಸಿದರೂ ಒಂದು ನಿರ್ದಿಷ್ಟ ಶಾಲೆಗೆ ಪರಿಪೂರ್ಣ ಹೊಂದಾಣಿಕೆ ಆಗಲಿಕ್ಕಿಲ್ಲ ಈ ಕಾರಣಕ್ಕಾಗಿಯೇ ಕೋಠಾರಿ ಶಿಕ್ಷಣ ಆಯೋಗೆ ಪ್ರತಿಯೊಂದು ಶೈಕ್ಷಣಿಕ ಸಂಸ್ಥೆ ತನ್ನದೇ ಆದ ಶೈಕ್ಷಣಿಕ ಯೋಜನೆ ಸಿದ್ಧಪಡಿಸಲು ಸೂಚಿಸಲು ಅದುವೇ ಸಂಸ್ಥೆಗೆ ಸಂಬಂಧಿಸಿದಂತೆ ವರದಿ ಮಾಡುವುದು ಎನ್ನಬಹುದು .

೨)ನಿಯಮ ಸಾಧನೆ

ಸಾಂಸ್ಥಿಕ ಯೋಜನೆಯಲ್ಲಿ ಸಂಸ್ಥೆಯ ಬಗ್ಗೆ ವರದಿ ಮಾಡುವಾಗ ನಿಯಮ ಸಾಧನೆ ಮುಖ್ಯವಾಗುತ್ತದೆ, ಇದು ಒಂದು ಅಣುಯೋಜನೆ ಆಗಿದೆ. ರಾಷ್ಟ್ರಮಟ್ಟದ ಶೈಕ್ಷಣಿಕ ಯೋಜನೆಯನ್ನು ಸಮಗ್ರಯೋಜನೆ ಎಂದು ಕರೆಯಬಹುದು. ಸಾಂಸ್ಥಿಕ ಯೋಜನೆಯಿಂದ ಸ್ಥಳೀಯ ಸಂಪನ್ಮೂಲಗಳ ಸಮರ್ಥ ಬಳಕೆಯಿಲ್ಲದೆ ಸತ್ಕ್ಷಣದ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಿಕೊಂಡು ಶಾಲೆಯ ಸರ್ವೋತೋಮುಖ ಅಭಿವೃದ್ಧಿ ಸಾಧಿಸಲು ಸಾಧ್ಯವಾಗದೆ , ಸಮುದಾಯದ ಸದಸ್ಯರು ಪೋಷಕರು , ಸಿಕ್ಷಕರು ವಿದ್ಯಾರ್ಥಿಗಳು ಸಂಸ್ಥೆಯ ಸರದಿಯಲ್ಲಿ ಪಾಲಿಟ್ಟಳುತ್ತಾರೆ .

- ಲಭ್ಯವಿರುವಲಕಶಕ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ
- ಸಂಸ್ಥೆಯು ತೀವ್ರ ಅಗತ್ಯತೆಗಳನ್ನು , ಬೇಡಿಕೆಗಳನ್ನು ಪೂರೈಸುವುದು .
- ಶಾಲಾ ಹಂತದ ಶಿಕ್ಷಣದ ಪ್ರಮಾಣವನ್ನು ಸುಧಾರಿಸುವುದು ,
- ಯೋಜನೆಯ ವಿಕೇಂದ್ರೀಕರಣ
- ಸೃಜನಶೀಲತೆ ಸ್ವಾತಂತ್ರ್ಯ ಮತ್ತು ಸ್ವಯಂ ಕಾರ್ಯಕ್ರಮ ಹಮ್ಮಿಕೊಳ್ಳುವ ಪ್ರೋತ್ಸಾಹ .
- ಸಮುದಾಯದ ಬೇಡಿಕೆಗಳನ್ನು ಅಗತ್ಯಗಳನ್ನು ವಿಶ್ಲೇಷಿಸುವುದು .

ಮಾಹಿತಿ ಕಲಿಯುವವರ ಅಧ್ಯಾಯನದ ಪದ್ದತಿ

ಇದೊಂದು ಸಂಸ್ಥೆಯ ಬಗ್ಗೆ ಆವರಿಯುವವರ ಅಧ್ಯಾಯದ ಪದ್ದತಿ ಆಗಿದೆ . ಸಂಸ್ಥೆಯ ಯೋಜನೆಯ ವರದಿ ಬರೆಯುವಾಗ ಮಾಹಿತಿ ಸಂಗ್ರಹಕಾರನ ಬಗ್ಗೆಯು ಅಧ್ಯಯನ ನಡೆಸಲಾಗುತ್ತದೆ . ಅದೇ ಅಧ್ಯಯನ ಪದ್ಧತಿ ಈ ಸಂಸ್ಥೆಯ ಬಗ್ಗೆ ತಿಳಿಯುವ ಆಸಕ್ತಿ ಮನೋಭಾವ ಕಲಿಯುವವವರಿಗೆ ಇರುವುದು ಅಗತ್ಯವಾಗುತ್ತದೆ . ಅವರ ಆಗತ್ಯತೆಗಳ ಮೇಲೆಯೇ ವರದಿ ಬರೆಯಲು ಮಾಹಿತಿ ಕಲಿಯುವವರ ಅಧ್ಯಾಯದಲ್ಲಿ ಈ ಲಕ್ಷಣಗಳು ಅಡಕವಾಗಿರಬೇಕು .

- 1) ಸಾಂಸ್ಥಿಕ ಯೋಜನೆಯು ಅಗತ್ಯತೆಗಳನ್ನು ಆಧರಿಸಬೇಕು ಮತ್ತು ನಿರ್ದಿಷ್ಟ ಉದ್ದೇಶವಿರಬೇಕು
- 2) ಗುರಿ ಪ್ರಾಶಸ್ಯೆ ಹೊಂದಿರಬೇಕು .
- 3) ಯೋಜನ ಸಮ ಸ್ವಾಭಿಮುಖವಾಗಿರಬೇಕು .
- 4) ಸಹಕಾರದ ತತ್ವ ಅಡಕವಾಗಿರಬೇಕು .
- 5) ಇದು ಸಂಸ್ಥೆಯ ಅವಶ್ಯಕತೆಗಳು ಮತ್ತು ಶಾಲಾ ಸಮುದಾಯಮಟ್ಟ ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಆಧಾರಿತವಾಗಿದೆ .

ನಿರ್ವಹಣಾ ಕಾರ್ಯವಿಧಾನ

ಸಂಸ್ಥೆಯ ಬಗ್ಗೆ ಸಂಬಂಧಿಸಿದಂತೆ ವರದಿ ಬರೆಯುವಾಗ ನಿರ್ವಹಣಾ ಕಾರ್ಯ ವಿಧಾನವ ಸಂಪೂರ್ಣ ಪರಿಪೂರ್ಣವಾಗಿರಬೇಕು . ಶಾಲಾ ಮಟ್ಟದಲ್ಲಿ ರಚನೆಯಾಗ ಬೇಕಾದ ಯೋಜನೆಯ ತಾಂತ್ರಿಕತೆ ಅಥವಾ ಸಿಗೊಳ್ಳುವ ಪದ್ಧಿಯ ಬಗ್ಗೆ ನಿರ್ದಿಷ್ಟ ಮುತ್ತು ಕಠಿಣವಾದ ನಿಯಮಗಳು ಆದರೂ ಯೋಜನೆಯನ್ನು ಸಿದ್ಧಪಡಿಸುವಾಗ ಸಾಮಾನ್ಯವಾಗಿ ಈ ಕೆಳಗಿನ ಕಾರ್ಯ ವಿಧಾನವನ್ನು ಅನುಸರಿಸಬೇಕು.

1) ಶಾಲಾ ಅಗತ್ಯತೆಗಳ ಸಮೀಕ್ಷೆ (Stirveytic needs of the School) .

2) Homenon obcos (Estimate the Resoruce

3) ಯೋಜನೆಯ ಸಿದ್ಧತೆ (Preparing the Plan)

4) ಯೋಜನೆಯ ಅನುಷ್ಟಾನ (Execution of the Plan)

5) ಯೋಜನೆಯ ಮೌಲ್ಯಮಾಪನ (Evaluating the Plan)

ಉಪಸಂಹಾರ :

ಸಂಸ್ಥಾ ಯೋಜನೆಯನ್ನು ತಯಾರಿಸುವಾಗ ಅಥವಾ ಸಂಸ್ಥೆಯ ಬಗ್ಗೆ ವರದಿ ಬರೆಯುವಾಗ ಈ ಮೇಲಿನ ಅಂಶಗಳಲ್ಲದೆ ಬೋಧನಾ ಸಲಕರಣೆ , ಸುಧಾರಣಾ ಕಾರ್ಯಕ್ರಮಗಳು ವಾರ್ಷಿಕಯೋಜನೆ , ಗ್ರಂಥಾಲಯ ಯೋಜನೆ , ವಿದ್ಯಾರ್ಥಿ ಕಲ್ಯಾಣ ಯೋಜನೆ ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡು ಸಂಸ್ಕಾಯೋಜನೆ ಅಥವಾ ಸಂಸ್ಥೆಯ ಬಗ್ಗೆ ವರದಿ ತಯಾರಿಸಬಹುದು .

ಈ ಸಂಸ್ಥಾ ವರದಿ ಬರೆಯುವಲ್ಲಿ ಪ್ರಗತಿ ಸಾಧಿಸುವಲ್ಲಿ ಸಮಾಜ , ಸರಕಾರ , ಆಡಳಿತವರ್ಗ , ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರ ಸಹಕಾರ ಅಗತ್ಯವಾಗಿದೆ .